198ನೇ ಅಧಿ. ಉ SL NO:-63 ದಿ:- 17.03.26

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ, ಇವರ ಶೂನ್ಯವೇಳೆಯ ಪ್ರಸ್ತಾವನೆ.

ತಂತ್ರಜ್ಞಾನ ಮತ್ತು ನಾವೀನ್ಯತೆಯಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿರುವ ನಮ್ಮ ರಾಜ್ಯದ 470 ಹಳ್ಳಿಗಳು ಇಂದಿಗೂ ಮೊಬೈಲ್ ನೆಟ್‌ವರ್ಕ್ ಇಲ್ಲದೆ 'ಡಿಜಿಟಲ್ ಕತ್ತಲೆ'ಯಲ್ಲಿರುವ ಬಗ್ಗೆ ದಿನಾಂಕ:14.03.2026ರ ವಿಜಯಕರ್ನಾಟಕ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

5G ತಂತ್ರಜ್ಞಾನದ ಈ ಕಾಲಘಟ್ಟದಲ್ಲಿ, ಕನಿಷ್ಠ ದೂರಸಂಪರ್ಕ ವ್ಯವಸ್ಥೆ ಇಲ್ಲದ ಗ್ರಾಮಗಳ ಪಟ್ಟಿಯಲ್ಲಿ ದಕ್ಷಿಣ ಭಾರತದಲ್ಲೇ ಕರ್ನಾಟಕ ಮೊದಲ ಸ್ಥಾನದಲ್ಲಿದೆ ಎಂಬುದು ತಿಳಿದುಬಂದಿರುತ್ತದೆ.

ಮಾಹಿತಿ ಪ್ರಕಾರ ಉತ್ತರ ಕನ್ನಡ ಜಿಲ್ಲೆಯಲ್ಲಿ 189 ಗ್ರಾಮಗಳು, ಶಿವಮೊಗ್ಗದಲ್ಲಿ 75, ಚಿಕ್ಕಮಗಳೂರಿನಲ್ಲಿ 40, ಚಾಮರಾಜನಗರದಲ್ಲಿ 25, ಬೆಳಗಾವಿಯಲ್ಲಿ 19 ಹಾಗೂ ಕಲಬುರಗಿಯಲ್ಲಿ 18 ಗ್ರಾಮಗಳು ಡಿಜಿಟಲ್ ಸಂಪರ್ಕದಿಂದ ವಂಚಿತವಾಗಿವೆ. ನಮ್ಮ ನೆರೆಯ ತಮಿಳುನಾಡಿನಲ್ಲಿ ಕೇವಲ 3 ಹಳ್ಳಿಗಳಲ್ಲಿ ಮಾತ್ರ ನೆಟ್‌ವರ್ಕ್ ಇಲ್ಲದಿರುವುದು ಹಾಗೂ ಕೇರಳ ರಾಜ್ಯ ಸಂಪೂರ್ಣ ಸಂಪರ್ಕ ಹೊಂದಿರುವುದು ನಮಗೆ ಮಾದರಿಯಾಗಬೇಕಿದೆ. ಗುಡ್ಡಗಾಡು ಹಾಗೂ ಕಠಿಣ ಭೌಗೋಳಿಕ ಪ್ರದೇಶಗಳ ನೆಪವೊಡ್ಡಿ ಈ ಹಳ್ಳಿಗಳ ಅಭಿವೃದ್ಧಿಯನ್ನು ಕುಂಠಿತಗೊಳಿಸುವುದು ಸರಿಯಲ್ಲ. ಶಿಕ್ಷಣ, ಆರೋಗ್ಯ ಮತ್ತು ತುರ್ತು ಸೇವೆಗಳಿಗೆ ಮೊಬೈಲ್ ಸಂಪರ್ಕ ಇಂದು ಮೂಲಭೂತ ಹಕ್ಕಿನಂತಿದೆ.

ಆದ್ದರಿಂದ, ಕೇಂದ್ರ ಸರ್ಕಾರದ 'ಗ್ರಾಮಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ' ಯೋಜನೆಯನ್ನು ಈ 470 ಹಳ್ಳಿಗಳಿಗೆ ಆದ್ಯತೆಯ ಮೇಲೆ ವಿಸ್ತರಿಸಲು ರಾಜ್ಯ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕೆಂದು ಪ್ರಸ್ತಾಪಿಸಿರುತ್ತಾರೆ.

**ಉತ್ತರ:-**

ಡಿಜಿಟಲ್ ಭಾರತ ನೆಟ್‌ವರ್ಕ್ (DBN) ಅಡಿಯಲ್ಲಿ 4G ಸ್ಯಾಚುರೇಷನ್ ಯೋಜನೆಯು ಭಾರತ ಸರ್ಕಾರದ ಒಂದು ಪ್ರಮುಖ ಉಪಕ್ರಮವಾಗಿದ್ದು, ರಾಜ್ಯ ಸರ್ಕಾರದ ಸಕ್ರಿಯ ಸಹಕಾರದೊಂದಿಗೆ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯಲ್ಲಿ ರಾಜ್ಯ ಸರ್ಕಾರದ ಮುಖ್ಯ ಪಾತ್ರವೆಂದರೆ ಮೊಬೈಲ್ ಟವರ್‌ಗಳ ಸ್ಥಾಪನೆಗೆ ಅಗತ್ಯವಾದ ಭೂಮಿಯನ್ನು ಒದಗಿಸುವುದು ಹಾಗೂ ಸ್ಥಳೀಯ ಸಮಸ್ಯೆಗಳು, ವಿಶೇಷವಾಗಿ ಭೂಮಿ ಸಂಬಂಧಿತ ವಿವಾದಗಳನ್ನು ಪರಿಹರಿಸುವುದರ ಮೂಲಕ ಮೂಲಸೌಕರ್ಯ ನಿರ್ಮಾಣಕ್ಕೆ ಹಾಗೂ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯನ್ನು ಸುಗಮಗೊಳಿಸುವುದು.

ಕರ್ನಾಟಕ ರಾಜ್ಯದಲ್ಲಿ ಒಟ್ಟು 29,818 ಗ್ರಾಮಗಳಿದ್ದು, ಇದರಲ್ಲಿ 29,348 ಗ್ರಾಮಗಳು ಮೊಬೈಲ್ ಸಂಪರ್ಕ ಹೊಂದಿವೆ. ಪ್ರಸ್ತುತ ಅಂದಾಜು 470 ಗ್ರಾಮಗಳು ಮಾತ್ರ ಸಂಪರ್ಕವಿಲ್ಲದೆ ಉಳಿದಿವೆ. ಕಳೆದ ಒಂದು ವರ್ಷದಲ್ಲಿ ಮಹತ್ತರ ಪ್ರಗತಿ ಸಾಧಿಸಲಾಗಿದ್ದು, ಸಂಪರ್ಕವಿಲ್ಲದ ಗ್ರಾಮಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆ ಕಂಡುಬಂದಿದೆ.

2026–27ನೇ ಸಾಲಿನಲ್ಲಿ ಇನ್ನೂ 277 ಗ್ರಾಮಗಳಿಗೆ ಸಂಪರ್ಕ ಒದಗಿಸುವ ಯೋಜನೆಯನ್ನು ಡಿಜಿಟಲ್

ಭಾರತ ನೆಟ್‌ವರ್ಕ್ (DBN) ಅಡಿಯಲ್ಲಿ ಅನುಮೋದಿಸಲಾಗಿದೆ, ಹೆಚ್ಚುವರಿಯಾಗಿ 85 ಗ್ರಾಮಗಳನ್ನು ಈ ಯೋಜನೆಗೆ ಸೇರಿಸಲು ಪ್ರಸ್ತಾಪಿಸಲಾಗಿದೆ.

ದೂರಸಂಪರ್ಕ ಇಲಾಖೆ (DoT), ಭಾರತ ಸರ್ಕಾರವು 4G ಸ್ಯಾಚುರೇಷನ್ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ರಾಜ್ಯ ಸರ್ಕಾರದ ವತಿಯಿಂದ ಎಲ್ಲಾ ರೀತಿಯ ಸಹಕಾರವನ್ನು ಒದಗಿಸಲಾಗುತ್ತಿದೆ.

ಈ ಯೋಜನೆಯ ಪ್ರಗತಿಯನ್ನು ಭಾರತ ಸರ್ಕಾರದ ಕ್ಯಾಬಿನೆಟ್ ಕಾರ್ಯಾಲಯದ ಕಾರ್ಯದರ್ಶಿ (ಸಮನ್ವಯ) ರವರ ಅಧ್ಯಕ್ಷತೆಯಲ್ಲಿ ನಡೆಯುವ ಪ್ರಗತಿ (PRAGATI) ಸಭೆಗಳಲ್ಲಿ ನಿಯಮಿತವಾಗಿ ಪರಿಶೀಲಿಸಲಾಗುತ್ತಿದೆ.

**(ಐಟಿಬಿಟಿ 61 ಎಲ್‌ಸಿಎಂ 2026)**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್,
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.